ಕರ್ನಾಟಕ ಸರ್ಕಾರ
(ವಾಣಿಜ್ಯ ತೆರಿಗೆಗಳ ಇಲಾಖೆ)

ಸಂಖ್ಯೆ: ಡಿ1/ಸಿ.ಆರ್-56/2015-16

ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರವರ ಕಛೇರಿ(ಆಡಳಿತ),
ಮೌ.ತೆ.ವಿ-3, 'ಬಿ' ಬ್ಲಾಕ್, ಟಿ.ಟಿ.ಎಂ.ಸಿ, 2ನೇ ಮಹಡಿ,
ಶಾಂತಿನಗರ, ಬೆಂಗಳೂರು, ದಿನಾಂಕ: 27/02/2016.
ದೂರವಾಣಿ ಸಂಖ್ಯೆ : 080-22221048.

2042
426673/15-16
ದಿ:2-3-16

## ಬಹಿರಂಗ ಹರಾಜು ಪ್ರಕಟಣೆ

ಬಿ.ಎಂ.ಟಿ.ಸಿ ಕಟ್ಟಡ, ಟಿ.ಟಿ.ಎಂ.ಸಿ. 'ಬಿ' ಬ್ಲಾಕ್, 2 ನೇ ಮಹಡಿ, ಶಾಂತಿನಗರ, ಬೆಂಗಳೂರು-27 ಇಲ್ಲಿ ಕಾರ್ಯನಿರ್ವಹಿಸುತ್ತಿರುವ ಈ ವಿಭಾಗದ ಕಛೇರಿಗಳಲ್ಲಿನ ಮುರಿದು ಹಾಳಾಗಿರುವ ಹಳೆಯ ನಿರುಪಯುಕ್ತ ಪೀಠೋಪಕರಣಗಳನ್ನು ದಿನಾಂಕ: 15/03/2016 ರ ಮಧ್ಯಾಹ್ನ 3.00 ಗಂಟೆಗೆ ಬಹಿರಂಗ ಹರಾಜು ಮೂಲಕ ವಿಲೇವಾರಿ ಮಾಡಲು ಉದ್ದೇಶಿಸಲಾಗಿದೆ. ಆಸಕ್ತರು ಹೆಚ್ಚಿನ ಮಾಹಿತಿಗಾಗಿ ಕಛೇರಿಯನ್ನು ನೇರವಾಗಿ / ದೂರವಾಣಿ ಮೂಲಕ ಇಲ್ಲವೇ ಇಲಾಖೆಯ **web Site: http://ctax.kar.nic.in** ಮುಖಾಂತರ ಸಂಪರ್ಕಿಸಲು ಕೋರಲಾಗಿದೆ.

27.2.2016

ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು (ಆಡಳಿತ),
ಮೌಲ್ಯ ವರ್ಧಿತ ತೆರಿಗೆ ವಿಭಾಗ-3, ಬೆಂಗಳೂರು.

ಮೌ.ತೆ.ವಿ.-3, ಬೆಂಗಳೂರು-27

ಕರ್ನಾಟಕ ಸರ್ಕಾರ
(ವಾಣಿಜ್ಯ ತೆರಿಗೆಗಳ ಇಲಾಖೆ)

ಸಂಖ್ಯೆ: ಡಿ1/ಸಿ.ಆರ್- /2015-16

20th

ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರವರ ಕಛೇರಿ(ಆಡಳಿತ),
ಮೌ.ತೆ.ವಿ-3, 'ಬಿ' ಬ್ಲಾಕ್, ಟಿ.ಟಿ.ಎಂ.ಸಿ, 2ನೇ ಮಹಡಿ,
ಶಾಂತಿನಗರ, ಬೆಂಗಳೂರು, ದಿನಾಂಕ: 27/02/2016.
ದೂರವಾಣಿ ಸಂಖ್ಯೆ : 080-22221048.

## : : ಬಹಿರಂಗ ಹರಾಜು ಸೂಚನೆ : :

ಈ ವಿಭಾಗದಿಂದ ಸಂಗ್ರಹಿತವಾಗಿರುವ ಮುರಿದು ಹಾಳಾಗಿರುವ ಹಳೆಯ ದುಸ್ಥಿತಿಯಲ್ಲಿರುವ ಹಾಗೂ ನಿರುಪಯುಕ್ತ ಪೀಠೋಪಕರಣಗಳು ದಿನಾಂಕ: 15/03/2016 ರಂದು ಕೆಳಗೆ ತಿಳಿಸಿದ ವೇಳಾಪಟ್ಟಿಯನುಸಾರ ಬಿ.ಎಂ.ಟಿ.ಸಿ ಕಟ್ಟಡ, ಟಿ.ಟಿ.ಎಂ.ಸಿ. 'ಬಿ' ಬ್ಲಾಕ್, 2 ನೇ ಮಹಡಿ, ಶಾಂತಿನಗರ, ಬೆಂಗಳೂರು-27 ಇಲ್ಲಿ ಹರಾಜು ಮೂಲಕ ವಿಲೇವಾರಿ ಮಾಡಲು ಉದ್ದೇಶಿಸಲಾಗಿದೆ ಮತ್ತು ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ: 080-22221048 ಹರಾಜಿಗೆ ಇಟ್ಟಿರುವ ಹಳೆಯ ನಿರುಪಯುಕ್ತ ಮುರಿದು ಹಾಳಾಗಿರುವ ಪೀಠೋಪಕರಣಗಳ ವಿವರ ಅಡಕ ಪತ್ರದಲ್ಲಿ ವಿಸ್ತೃತವಾಗಿ ಸೂಚಿಸಲಾಗಿದೆ.

**ಹರಾಜಿನ ಷರತ್ತುಗಳು ಮತ್ತು ನಿಬಂಧನೆಗಳು :**

1. ಮೇಲೆ ಸೂಚಿಸಿರುವ ಹರಾಜಿಗೆ ಇಟ್ಟಿರುವ ಸಾಮಾಗ್ರಿಗಳನ್ನು ಹರಾಜು ದಿನಾಂಕದಂದು ಬೆಳಿಗ್ಗೆ 10.30 ಗಂಟೆಯಿಂದ 12.00 ಗಂಟೆಯವರೆಗೆ ಆಸಕ್ತಿ ಬಿಡ್ಡುದಾರರು ಪರಿಶೀಲಿಸಬಹುದಾಗಿದೆ.
2. ಆಸಕ್ತ ನೊಂದಾಯಿತ ಬಿಡ್ಡುದಾರರ ನೊಂದಣಿ ಪ್ರಕ್ರಿಯೆ ಬೆಳಿಗ್ಗೆ 12.30 ಗಂಟೆಯಿಂದ 1.30 ಗಂಟೆಗೆ ಮುಕ್ತಾಯವಾಗುತ್ತದೆ. ಆಸಕ್ತ ಬಿಡ್ಡುದಾರರು ಹರಾಜಿ ಪ್ರಕ್ರಿಯೆಯಲ್ಲಿ ಭಾಗವಹಿಸುವ ಮುನ್ನ ರೂ. 5000/- (ರೂ. ಐದು ಸಾವಿರ ಮಾತ್ರ) ಗಳು ಭದ್ರತಾ ಠೇವಣಿ ನೀಡಿ ತಮ್ಮ ಹೆಸರು / ಸಂಸ್ಥೆಯ ಹೆಸರನ್ನು ನೊಂದಾಯಿಸಿಕೊಂಡು ಹರಾಜು ಪ್ರಕ್ರಿಯೆಯಲ್ಲಿ ಭಾಗವಹಿಸಲು, ಹರಾಜು ಪ್ರಕ್ರಿಯೆ ನಿಯೋಜಿಸುವ ಅಧಿಕಾರಿಗಳು / ಸಿಬ್ಬಂದಿಯವರಿಂದ ಟೋಕನ್ ಪಡೆಯತಕ್ಕದ್ದು.
3. ಹರಾಜು ಪ್ರಕ್ರಿಯೆಯನ್ನು 3.00 ಗಂಟೆ ಸಮಯದಲ್ಲಿ ಪ್ರಾರಂಭಿಸಲಾಗುವುದು ಕೇವಲ ಭದ್ರತಾ ಠೇವಣಿ ಪಡೆದು ಟೋಕನ್‌ನ್ನು ಪಡೆದ ಆಸಕ್ತ ಬಿಡ್ಡುದಾರರು ಮಾತ್ರ ಹರಾಜು ಪ್ರಕ್ರಿಯೆಯಲ್ಲಿ ಭಾಗವಹಿಸಬಹುದಾಗಿದೆ.
4. ಹರಾಜಿನಲ್ಲಿ ಯಶಸ್ವಿಯಾದ ಬಿಡ್ಡುದಾರರು ಹರಾಜು ಪ್ರಕ್ರಿಯೆ ಮುಗಿದ ಒಂದು ಗಂಟೆಯ ಅವಧಿಯೊಳಗೆ ಬಿಡ್ಡಿನ ಪೂರ್ತಿ ಮೊತ್ತ ಹಾಗೂ ಸದರಿ ಮೊತ್ತಕ್ಕೆ ವ್ಯಾಟ್ ಶೇ.5.5% ರಂತೆ ಸೇರಿಸಿ ಒಟ್ಟು ಮೊತ್ತವನ್ನು ನಗದು ರೂಪದಲ್ಲಿ ಪಾವತಿ ಮಾಡಿ ಸದರಿ ಸಾಮಾಗ್ರಿಗಳನ್ನು ಹರಾಜು ಸ್ಥಳದಿಂದ ನಿಮ್ಮ ಸ್ವಂತ ಖರ್ಚಿನಲ್ಲಿ ಸಾಗಿಸಿಕೊಳ್ಳತಕ್ಕದ್ದು.

5. ಮೇಲಿನ ಸಾಮಾಗ್ರಿಗಳನ್ನು " ಎಲ್ಲಿ ಹೇಗಿವೆಯೋ ಹಾಗಿನ ಸ್ಥಿತಿಯಲ್ಲಿ" ಬಹಿರಂಗ ಹರಾಜಿನ ಮೂಲಕ ವಿಲೇವಾರಿ ಮಾಡಲಗುವುದು.

6. ಅತೀ ಹೆಚ್ಚಿನ ಮೊತ್ತಕ್ಕೆ ಬಿಡ್ ಮಾಡುವ ವ್ಯಕ್ತಿಗಳ / ಸಂಸ್ಥೆಗಳ ಬಿಡ್ಡುಗಳನ್ನು ಅಂಗೀಕರಿಸುವ ಅಧಿಕಾರಿವನ್ನು ಕೆಳಗೆ ಸಹಿ ಮಾಡಿರುವ ಅಧಿಕಾರಿಗಳು ಹೊಂದಿರುತ್ತಾರೆ.

7. ಹರಾಜಿನಲ್ಲಿ ಹಣ ಕಟ್ಟಿ ಯಶಸ್ವಿ ಆಗದವರಿಗೆ ಕಟ್ಟಿದ ಹಣವನ್ನು ಕೂಡಲೇ ಹಿಂತಿರುಗಿಸಲಾಗುವುದು.

8. ಇಲಾಖಾ ಸಿಬ್ಬಂದಿಯವರು ಹರಾಜಿನಲ್ಲಿ ಭಾಗವಹಿಸಲು ಅರ್ಹರಲ್ಲ.

9. ಬಹಿರಂಗ ಹರಾಜಿನಲ್ಲಿ ಯಾವುದೇ ವಾದ ವಿವಾದಗಳಿಗೆ ಅವಕಾಶವಿರುವುದಿಲ್ಲ. ಯಾವುದೇ ತಕರಾರುಗಳಿಗೆ, ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರವರ ಕಛೇರಿ(ಆಡಳಿತ),ಮೌ.ತೆ.ವಿ–3, 'ಬಿ' ಬ್ಲಾಕ್, ಟಿ.ಟಿ.ಎಂ.ಸಿ, 2ನೇ ಮಹಡಿ, ಶಾಂತಿನಗರ, ಬೆಂಗಳೂರು, ಇವರ ತೀರ್ಮಾನವೇ ಅಂತಿಮ ಎಂದು ತಿಳಿಯುವುದು.

10. ಯಾವುದೇ ಸಂಧರ್ಭದಲ್ಲಿಯೂ ಸೂಚನೆ ನೀಡದೇ ಮಾರಾಟದ ಹರಾಜನ್ನು ಅಂಗೀಕರಿಸಿರುವ, ತಿರಸ್ಕರಿಸುವ, ಮುಂದೂಡುವ, ರದ್ದುಪಡಿಸುವ ಎಲ್ಲಾ ಅಧಿಕಾರವು ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರವರ ಕಛೇರಿ(ಆಡಳಿತ),ಮೌ.ತೆ.ವಿ–3, ಬೆಂಗಳೂರು ಇವರಿಗೆ ಇರುತ್ತದೆ.

27/02/2016

ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು (ಆಡಳಿತ),
ಮೌಲ್ಯ ವರ್ಧಿತ ತೆರಿಗೆ ವಿಭಾಗ–3, ಬೆಂಗಳೂರು.

ಪ್ರತಿಯನ್ನು:

1. ಮಾನ್ಯ ವಾಣಿಜ್ಯ ತೆರಿಗೆ ಆಯುಕ್ತರು (ಕರ್ನಾಟಕ), ವಾಣಿಜ್ಯ ತೆರಿಗೆ ಕಾರ್ಯಾಲಯ, ಬೆಂಗಳೂರು ಇವರಿಗೆ ಮಾಹಿತಿಗಾಗಿ.
2. ಸಾರ್ವಜನಿಕರ ಮಾಹಿತಿಗಾಗಿ ಸೂಚನಾ ಫಲಕಕ್ಕೆ.
3. ಬೆಂಗಳೂರು ವ್ಯಾಪ್ತಿಯಲ್ಲಿ ಪ್ರಸಾರವಾಗುವ ಯಾವುದಾದರೂ ದಿನಪತ್ರಿಕೆಯಲ್ಲಿ ಪ್ರಕಟಿಸಲು ಕ್ರಮಕೈಗೊಳ್ಳುವುದು.
4. ಕಛೇರಿ ಕಡತಕ್ಕೆ.